# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 204 | Pages. 2 | Date: 22-06-2025, SUNDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 204 - ಪುಟಗಳು : 2 - 22 ಜೂನ್ 2025 ಭಾನುವಾರ | Ph: 8762954248 | ದರ : ₹1


# ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ

## ಜಿಲ್ಲಾದ್ಯಂತ ಸಂಭ್ರಮದ ಯೋಗ ದಿನ | ಕೇಂದ್ರ ಸಚಿವ ಸೋಮಣ್ಣ, ಸಂಸದರ ಉಪಸ್ಥಿತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಸೇರಿದಂತೆ ಜಿಲ್ಲಾದ್ಯಂತ ಶನಿವಾರ 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ ಈ ವರ್ಷದ ಘೋಷವಾಕ್ಯವಾಗಿತ್ತು. ಸಾಂಸ್ಕೃತಿಕ ಕೇಂದ್ರಗಳಲ್ಲಿ ಯೋಗ ಹಮ್ಮಿಕೊಳ್ಳುವುದು ಈ ವರ್ಷದ ಉದ್ದೇಶವಾಗಿದ್ದರಿಂದ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಜಲಶಕ್ತಿ ಹಾಗು ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಭಾಗವಹಿಸಿದ್ದರು. ತಾಲ್ಲೂಕು ಕೇಂದ್ರಗಳಲ್ಲೂ ಕ್ಷೇತ್ರ ಶಾಸಕರು ಹಾಗೂ ಅಧಿಕಾರಿಗಳು ಸರಳ ಸಮಾರಂಭದಲ್ಲಿ ಭಾಗಿಯಾದರು. ಹಾಸನದ ಜಿಲ್ಲಾ ಹಾಕಿ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಯೋಗ ದಿನಾಚರಣೆಯಲ್ಲಿ ಸಂಸದ ಶ್ರೇಯಸ್ ಪಟೇಲ್ ಪಾಲ್ಗೊಂಡರು.

ಹಳೇಬೀಡು ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವ ವಿ. ಸೋಮಣ್ಣ, ಭಾರತೀಯ ಸಂಸ್ಕೃತಿ, ಸಾರ್ವಭೌಮತ್ವ, ಇತಿಹಾಸ ಹಾಗೂ ಭಾರತದ ಯೋಗದ ಉಪಯೋಗವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿದೇಶಗಳಿಗೆ ಪರಿಚಯಿಸಿದ್ದಾರೆ. ಆರೋಗ್ಯಕ್ಕಾಗಿ ಯೋಗ ಎಂದು ನರೇಂದ್ರ ಮೋದಿ ಕರೆ ನೀಡಿದ ಫಲವಾಗಿ, ಲೆಕ್ಕವಿಲ್ಲದಷ್ಟು ಮಂದಿ ಯೋಗ ಅಳವಡಿಸಿಕೊಂಡು ಆರೋಗ್ಯ ಕಾಪಾಡಿಕೊಂಡಿದ್ದಾರೆ. ಭಾರತದ ಯೋಗ ನೆನ್ನೆ ಮೊನ್ನೆ ಹುಟ್ಟಿಲ್ಲ, ಪ್ರಾಚೀನ ಕಾಲದಿಂದಲೂ ಸಾಕಷ್ಟು ಭಾರತಿಯರು ಯೋಗ ಮಾಡುತ್ತ ಆರೋಗ್ಯವಂತರಾಗಿ ಬದುಕಿದ್ದಾರೆ ಎಂದರು.

ಪ್ರವಾಸಿ ತಾಣ ಹಳೇಬೀಡಿನ ಅಭಿವೃದ್ದಿ 50 ವರ್ಷದ ಹಿಂದೆಯೇ ಆಗಬೇಕಾಗಿತ್ತು. ಐತಿಹಾಸಿಕ ಸ್ಮಾರಕಗಳಿರುವ ಪ್ರವಾಸಿ ತಾಣಗಳಲ್ಲಿ ಪ್ರಧಾನಿ ಮೋದಿ ಅವರು ಅಂತಾರಾಷ್ಟ್ರೀಯ ಯೋಗ ದಿನಾಚಾರಣೆ ಆಚರಿಸುವ ಪರಿಪಾಠ ಬೆಳೆಸಿಕೊಂಡಿದ್ದಾರೆ. ಇದರಿಂದ ಪ್ರವಾಸೋಧ್ಯಮ ಬೆಳವಣಿಗೆಗೂ ಅನುಕೂಲವಾಗಿದೆ ಎಂದು ಸೋಮಣ್ಣ ವಿವರಿಸಿದರು.

ಶಾಸಕ ಎಚ್.ಕೆ. ಸುರೇಶ್ ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಪ್ರತಿಯೊಬ್ಬ ಭಾರತೀಯನ ಹಿತಕ್ಕಾಗಿ ದುಡಿಯುತ್ತಿದ್ದಾರೆ. ಎಲ್ಲರೂ ಆರೋಗ್ಯವಂತರಾಗಿ ಬದುಕಬೇಕು ಎಂಬ ಚಿಂತನೆಯಲ್ಲಿದ್ದಾರೆ. ಮೋದಿ ಅವರು ಯೋಗದ ಧ್ವನಿ ಎತ್ತಿದ ಪ್ರಭಾವ ಯೋಗ ಅಳವಡಿಸಿಕೊಳ್ಳುವರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದ ಮುಂದೊಂದು ದಿನ ಭಾರತ ರೋಗ ಮುಕ್ತವಾಗಲಿದೆ ಎಂದರು.

ಪುಷ್ಪಗಿರಿಯ ಸೋಮಶೇಖರ ಸ್ವಾಮೀಜಿ ಮಾತನಾಡಿ, ಯೋಗ ಒಂದು ದಿನಕ್ಕೆ ಸಿಮೀತ ಆಗಬಾರಾದು. ಯೋಗ ಕರಗತ ಮಾಡಿಕೊಂಡು ಜೀವನದಲ್ಲಿ ಪ್ರತಿ ನಿತ್ಯ ಅಳವಡಿಸಿಕೊಳ್ಳಬೇಕು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಶಾಂತಲಾ, ಉಪ ವಿಭಾಗಾಧಿಕಾರಿ ಶ್ರುತಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ.ಎಸ್. ಶಶಿಕಲಾ, ತಹಶೀಲ್ದಾರ್ ಎಂ. ಮಮತಾ, ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿದ್ದೇಶ್ ನಾಗೇಂದ್ರ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ವಸಂತಕುಮಾರ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ವಿ. ವಿಜಯ್, ಸಹಾಯಕ ಪುರಾತತ್ವ ಅಧೀಕ್ಷಕ ರಾಘವನ್, ಎಂಜಿನಿಯರ್ ಶ್ರೀನಿವಾಸ, ಸಹಾಯಕ ಸ್ಮಾರಕ ಸಂರಕ್ಷಣಾಧಿಕಾರಿ ಸುನಿಲ್ ಪಾಲ್ಗೊಂಡಿದ್ದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ ಮಾತನಾಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಎಸ್ಪಿ ಮೊಹಮ್ಮದ್ ಸುಜೀತಾ ಹಾಗೂ ಇತರರಿದ್ದರು.



### ಯೋಗ ನಿತ್ಯ ಚಟುವಟಿಕೆಯಾಗಲಿ

ಯೋಗ ಎಂಬುದು ದೇಶದ ಪವಿತ್ರತೆಯ ಸಂಕೇತ, ಯೋಗವನ್ನು ದಿನನಿತ್ಯದ ಚಟುವಟಿಕೆಯ ಒಂದು ಭಾಗವಾಗಿಸಿಕೊಳ್ಳುವುದು ಒಳಿತು ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು. ಜಿಲ್ಲಾಡಳಿತದ ವತಿಯಿಂದ ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿಂದು ಆಯೋಜಿಸಲಾಗಿದ್ದ 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮಾತನಾಡಿ, ಇಡೀ ವಿಶ್ವಕ್ಕೆ ಯೋಗ ಪರಿಚಯಿಸಿದ ಕೀರ್ತಿ ಭಾರತ ದೇಶಕ್ಕೆ ಸಲ್ಲುತ್ತದೆ ಎಂದರು.

ಯೋಗ ಭಾರತದ ಪರಂಪರೆ ಸಂಕೇತ. ಅದನ್ನು ಇಂದು ವಿಶ್ವದ ಬಹುತೇಕ ದೇಶಗಳಲ್ಲಿ ಆಚರಣೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಅದೇ ರೀತಿ ಶಾಲಾ ಕಾಲೇಜುಗಳಲ್ಲಿ ಕೂಡ ಯೋಗ ತರಬೇತಿ ನಡೆಯಬೇಕು. ಜೊತೆಗೆ ಉಳಿಸಿ ಬೆಳೆಸುವ ಕೆಲಸವನ್ನು ಎಲ್ಲರೂ ಮಾಡಬೇಕಿದೆ ಎಂದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಯೋಗ ದೇಹ ಮತ್ತು ಮನಸ್ಸಿನ ಆರೋಗ್ಯ ಕಾಪಾಡಲು ಸಹಾಯಕವಾಗಿದೆ. ಯೋಗ ದೇಹ, ಆತ್ಮ ಮನಸ್ಸು ಎಲ್ಲವನ್ನೂ ಒಗ್ಗೂಡಿಸುವ ಕೆಲಸ ಮಾಡುತ್ತ, ಈ ನಿಟ್ಟಿನಲ್ಲಿ ಎಲ್ಲರೂ ಯೋಗವನ್ನು ಅಳವಡಿಸಿಕೊಳ್ಳುವುದು ಒಳಿತು ಎಂದರು.


### ಮೋದಿ ಭಾಷಣ ಲೈವ್ ತೊಂದರೆ

ನರೇಂದ್ರ ಮೋದಿ ಅವರ ಭಾಷಣದ ಲೈವ್ ಪ್ರಸಾರದ ವೇಳೆ ಸಮಸ್ಯೆ ಕಂಡುಬಂತು. ಭಾಷಣದ ಸಾಲುಗಳು ಮುಂದಕ್ಕೆ ಸಾಗದೆ, ರಿಪೀಟ್ ಆಗುತ್ತಿತ್ತು. ಕೇಂದ್ರ ಪುರಾತತ್ವ ಇಲಾಖೆಯ ಲ್ಯಾಪ್ ಟಾಪ್‌ನಲ್ಲಿ ಅವರಿಗೆ ಲಭ್ಯವಿದ್ದ ಲಿಂಕ್ ಬಳಸಿ ಭಾಷಣ ಪ್ರಸಾರ ಮಾಡಲಾಗಿತ್ತು. ಲಿಂಕ್ ಬದಲಿಸಿದ ನಂತರ ಭಾಷಣ ಸರಾಗವಾಗಿ ಪ್ರಸಾರವಾಯಿತು.





ಹಾಸನದ ಎಸ್.ಬಿ.ಎಂ. ಕಾಲನಿಯ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನ ಆವರಣದಲ್ಲಿ ಶನಿವಾರ ರೋಟರಿ ಕ್ಲಬ್ ಆಫ್ ಹಾಸನ್ ಸನ್‌ರೈಸ್, ಅಡಗೂರು ಚೇತನಾ ಯೋಗ ಕೇಂದ್ರ, ಶ್ರೀ ವರಸಿದ್ಧಿ ವಿನಾಯಕ ಯೋಗ ಸಭಾ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನ ಹಮ್ಮಿಕೊಳ್ಳಲಾಗಿತ್ತು. 50ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿದ್ದರು. ಯೋಗ ಗುರು ಚೇತನ್ ಗುರೂಜಿ, ವರಸಿದ್ದಿ ವಿನಾಯಕ ಯೋಗ ಸಭಾ ಮುಖ್ಯಸ್ಥ ಮಧು ಶರ್ಮಾ, ವಜ್ರಕುಮಾರ್, ಎಂ.ಬಿ. ವಿಶ್ವನಾಥ್, ಕೆ.ಎಸ್. ಯೋಗೇಶ್, ಮಧು ಹಾಗೂ ಇತರರಿದ್ದರು.



ಆಲೂರು ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ಶನಿವಾರ ಶ್ರೀ ಬಸವೇಶ್ವರ ಶಾಲೆ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ರುದ್ರೇಶ್ ತಂಡದವರಿಂದ ವೀಣಾ ವಾದನ ಸಂಗೀತ ಕಾರ್ಯಕ್ರಮ ನೆರವೇರಿತು. ಕಿರುತೆರೆ ನಟ ಮದನ್ ಅವರಿಗೆ ಶಾಲೆಯ ಆಡಳಿತ ಮಂಡಳಿಯಿಂದ ಸನ್ಮಾನಿಸಲಾಯಿತು. ಶಾಲೆಯ ಮುಖ್ಯಸ್ಥ ಡಾ. ಜಯರಾಜ್, ಸತ್ಯಮ್ಮ, ದೀಪರಾಜ್, ಡಾ. ರೇಖಾ ಹಾಗೂ ಇತರರಿದ್ದರು.

## ಎಲ್ಲ ಧರ್ಮಕ್ಕಿಂತ ಯೋಗ ಮಿಗಿಲಾದುದು



ಸಕಲೇಶಪುರ: ಭಾರತೀಯ ಸನಾತನ ಯೋಗ ಪದ್ಧತಿ ಜಗತ್ತಿನ ಎಲ್ಲಾ ಧರ್ಮಕ್ಕಿಂತಲೂ ಮಿಗಿಲಾದುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಯೋಗ ಚೇತನ ಟ್ರಸ್ಟ ವತಿಯಿಂದ ಆಯೋಜಿಸಿದ್ದ 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮಾತನಾಡಿದ ಅವರು, ಭಾರತೀಯ ಸನಾತನ ಪರಂಪರೆ ಜಗತ್ತಿನೆಲ್ಲೆಡೆ ಪಸರಿಸುತ್ತಿದೆ. ಇತ್ತೀಚೆಗೆ ವಿದೇಶಗಳಲ್ಲೂ ಭಾರತೀಯ ಸಂಸ್ಕಾರ ಸಂಸ್ಕೃತಿಯನ್ನು ಪಾಲಿಸುವರ ಸಂಖ್ಯೆ ಹೆಚ್ಚುತ್ತಿರುವುದೇ ಇದಕ್ಕೆ ಸಾಕ್ಷಿ. ವೈಜ್ಞಾನಿಕ ತಳಹದಿಯಲ್ಲಿ ನಿಂತಿರುವ ನಮ್ಮ ಧರ್ಮದ ಆಚರಣೆಗಳನ್ನು ಮುಂದಿನ ಪೀಳಿಗೆಗೆ ಉಳಿಸಬೇಕಾಗಿದೆ. ಆರೋಗ್ಯಕ್ಕಾಗಿ ಪ್ರತಿನಿತ್ಯ ಯೋಗ ಅಭ್ಯಾಸ ಅನಿವಾರ್ಯವಾಗಿದೆ. ನಮ್ಮ ದೇಶದಲ್ಲಿನ ಯೋಗ ಪದ್ಧತಿಯನ್ನು ಪ್ರಪಂಚದಾದ್ಯಂತ ವಿಸ್ತರಿಸಿದ ಕಿರ್ತಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲ್ಲಬೇಕು ಎಂದರು.

ಯೋಗ ಚೇತನ ಟ್ರಸ್ಟ್ ಅಧ್ಯಕ್ಷ ಲಕ್ಷ್ಮೀ ರಂಗನಾಥ್ ಮಾತನಾಡಿ, ನಮ್ಮ ಟ್ರಸ್ಟ್ ವತಿಯಿಂದ ಕಳೆದ 20 ವರ್ಷಗಳಿಂದ ಪ್ರತಿನಿತ್ಯ ಎಲ್ಲರಿಗೂ ಉಚಿತವಾಗಿ ಯೋಗಾಭ್ಯಾಸ ಹೇಳಿಕೊಡುತ್ತಿದ್ದು ಅದರೊಂದಿಗೆ ಪರಿಸರ, ಆರೋಗ್ಯ ಕಾಪಾಡುವ ಸಮಾಜಾಮುಖಿ ಕೆಲಸಗಳನ್ನು ನಡೆಸಿಕೊಂಡು ಬರುತ್ತಿರುವುದಾಗಿ ಹೇಳಿದರು.

## ಯಡಕುಮರಿ ಬಳಿ ರೈಲ್ವೆ ಹಳಿ ಮೇಲೆ ಬಂಡೆ ಕುಸಿತ

### 6 ಗಂಟೆಗಳ ನಿರಂತರ ಕಾರ್ಯಾಚರಣೆ | ರೈಲು ಸಂಚಾರ ಪುನಾರಂಭ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮಲೆನಾಡು ಭಾಗದಲ್ಲಿ ಸುರಿಯುತ್ತಿರುವ ನಿರಂತರ ಮಳೆಯಿಂದ ತಾಲ್ಲೂಕಿನ ಅರೆಬೆಟ್ಟ-ಯಡಕುಮರಿ ಮಧ್ಯೆ ರೈಲ್ವೆ ಹಳಿ ಮೇಲೆ ಶನಿವಾರ ಗುಡ್ಡ ಕುಸಿದು ಸುಮಾರು ಐದಾರು ಗಂಟೆಗಳ ಕಾಲ ಬೆಂಗಳೂರು-ಮಂಗಳೂರು ನಡುವೆ ರೈಲು ಸಂಚಾರ ಸ್ಥಗಿತವಾಗಿತ್ತು.

ಮುಂಜಾನೆ 3 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ತಕ್ಷಣವೇ ಕಾರ್ಯಾಚರಣೆ ಆರಂಭಿಸಿದ ರೈಲ್ವೆ ಅಧಿಕಾರಿ ಹಾಗೂ ಸಿಬ್ಬಂದಿ ಬೆಳಿಗ್ಗೆ 9.30ರ ಸುಮಾರಿಗೆ ಬಂಡೆಗಳನ್ನು ತೆರವುಗೊಳಿಸಿ ಹಳಿ ದುರಸ್ತಿಪಡಿಸಿ ರೈಲು ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಪಶ್ಚಿಮಘಟ್ಟ ಭಾಗದಲ್ಲಿ ಭಾರೀ ಮಳೆಯಿಂದ 74-75ನೇ ಮೈಲಿನಲ್ಲಿ ಹಳಿ ಮೇಲೆ ಗುಡ್ಡ ಕುಸಿದಿತ್ತು. ಇದರಿಂದ ಬೆಂಗಳೂರು-ಕಣ್ಣೂರು ಬೆಂಗಳೂರು-ಮುರುಡೇಶ್ವರ ರೈಲುಗಳ ಸಂಚಾರ ಕೆಲವು ಗಂಟೆ ಸ್ಥಗಿತಗೊಂಡಿತ್ತು.

ಯಾವುದೇ ಮುನ್ಸೂಚನೆ ಇಲ್ಲದ ಕಾರಣ ಬಂಡೆ ಬಿದ್ದಿದ್ದ ಅಣತಿ ದೂರದಲ್ಲಿ ಬೆಂಗಳೂರು ಕಣ್ಣೂರು ಎಕ್ಸ್‌ಪ್ರೆಸ್ ರೈಲು ನಿಂತಿತ್ತು. ಬಂಡೆ ಉರುಳಿ ಬಿದ್ದ ರಭಸಕ್ಕೆ ರೈಲ್ವೆ ಹಳಿ ಡ್ಯಾಮೇಜ್ ಆಗಿತ್ತು. ಹೀಗಾಗಿ ಅರ್ಧ ಮಾರ್ಗದಲ್ಲೇ ರೈಲುಗಳು ನಿಲ್ಲಬೇಕಾಯಿತು.



ಸಕಲೇಶಪುರ ರೈಲ್ವೆ ನಿಲ್ದಾಣದಲ್ಲಿ ನಿಂತ ರೈಲು ಪ್ರಯಾಣಿಕರಿಗೆ ಅಧಿಕಾರಿಗಳೇ ಕಾಫಿ-ತಿಂಡಿ ವ್ಯವಸ್ಥೆ ಮಾಡಿದರು. ನಂತರ ಬೆಳಕಾಗುವವರೆಗೂ ಎಲ್ಲರೂ ರೈಲಿನಲ್ಲೇ ರಾತ್ರಿ ಕಳೆಯಬೇಕಾಯಿತು. ಕೆಲವರು ಬೇರೆ ವಾಹನದಲ್ಲಿ ತಮ್ಮ ತಮ್ಮ ಊರಿಗೆ ತೆರಳಿದರು.

ಸಲೇಶಪುರದಲ್ಲಿ ನಿಂತಿದ್ದ ಬೆಂಗಳೂರು-ಮುರುಡೇಶ್ವರ, ವಿಜಯಪುರ-ಮಂಗಳೂರು ಸೆಂಟ್ರಲ್ ಎಕ್ಸ್‌ಪ್ರೆಸ್ ರೈಲುಗಳು ಸಂಚಾರ ಆರಂಭಿಸಿದವು. ಯಡಕುಮರಿಯಲ್ಲಿ ನಿಂತಿದ್ದ ವಿಜಯಪುರ-ಮಂಗಳೂರು ಸೆಂಟ್ರಲ್ ರೈಲುಗಾಡಿ ಸಹ ಅಲ್ಲಿಂದ ಹೊರಟಿತು.

ಯಡಕುಮರಿ ಬಳಿ ರೈಲು ಹಳಿ ಮೇಲೆ ಉರುಳಿದ್ದ ಮೂರು ಬಂಡೆಗಳು ಉರುಳಿದ್ದು ಎಂಬ ಅನುಮಾನ ಎಲ್ಲರನ್ನೂ ಕಾಡತೊಡಗಿದೆ. ಮೈಸೂರು ರೈಲ್ವೆ ವಿಭಾಗದ ಅಧಿಕಾರಿಗಳ ಪ್ರಕಾರ, ಹಳಿ ಪಕ್ಕದ ಗುಡ್ಡದ ಮೇಲಿಂದ ಬಂಡೆ ಕುಸಿದಿದ್ದವು.

ಇದಕ್ಕೆ ಪುಷ್ಟಿ ಎಂಬಂತೆ ಮೇಲಿಂದ ಜಾರಿರುವ ಕುರುಹು ಸ್ಥಳದಲ್ಲಿ ಕಾಣುತ್ತಿತ್ತು. ಆದರೆ ಸ್ಥಳೀಯ ಅಧಿಕಾರಿಗಳು, ಮಳೆಗಾಲ ಸಂದರ್ಭದಲ್ಲಿ ಹಳಿ ಮೇಲೆ ಮಣ್ಣು ಕುಸಿತ ಆಗುವುದನ್ನು ತಪ್ಪಿಸಲು ಫೌಂಡೇಷನ್ ನಂತೆ ಬಂಡೆಗಳನ್ನು ಬಳಸಲು ಸಕಲೇಶಪುರ ಕಡೆಯಿಂದ ಯಡಕುಮರಿಗೆ ಭಾರೀ ಗಾತ್ರದ ಬಂಡೆಗಳನ್ನು ಗೂಡ್ಸ್ ವ್ಯಾಗಿನ್‌ನಲ್ಲಿ ಸಾಗಿಸುವ ವೇಳೆ ಆಯ ತಪ್ಪಿ ಹಳಿ ಮೇಲೆ ಬಿದ್ದವು ಎಂದು ಹೇಳುತ್ತಿದ್ದಾರೆ. ಇದು ಹೌದಾದರೆ ಹಳಿಗಳು ಅಷ್ಟೊಂದು ಡ್ಯಾಮೇಜ್ ಆಗುತ್ತಿರಲಿಲ್ಲ. ಬಂಡೆ ಸಾಗಿಸುತ್ತಿದ್ದ ಗೂಡ್ಸ್ ವ್ಯಾಗಿನ್ ಎಲ್ಲಿ ಹೋಯಿತು ಎಂಬ ಪ್ರಶ್ನೆ ಕಾಡುತ್ತಿದೆ.

## ಟ್ಯಾಂಕರ್‌ಗೆ ಸಾರಿಗೆ ಬಸ್ ಡಿಕ್ಕಿ 30ಕ್ಕೂ ಹೆಚ್ಚು ಮಂದಿಗೆ ಗಾಯ





ಸಕಲೇಶಪುರ: ಕೆಎಸ್‌ಆರ್‌ಟಿಸಿ ಬಸ್ ಹಾಗೂ ಟ್ಯಾಂಕರ್ ಡಿಕ್ಕಿಯಾಗಿ ಬಸ್‌ನಲ್ಲಿದ್ದ 30ಕ್ಕೂ ಹೆಚ್ಚು ಜನರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಮಾರನಹಳ್ಳಿ ಸಮೀಪ ಶನಿವಾರ ನಡೆದಿದೆ. ಸಕಲೇಶಪುರದಿಂದ ಧರ್ಮಸ್ಥಳದ ಕಡೆಗೆ ತೆರಳುತ್ತಿದ್ದ ಸಾರಿಗೆ ಬಸ್ ಚಾಲಕ ಓವರ್‌ಟೇಕ್ ಮಾಡಲು ಯತ್ನಿಸಿದ ವೇಳೆ ಮಂಗಳೂರು ಕಡೆಯಿಂದ ಬರುತ್ತಿದ್ದ ಗ್ಯಾಸ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿದೆ. ಬಸ್‌ನಲ್ಲಿ ಇದ್ದ ಎಲ್ಲಾ ಪ್ರಯಾಣಿಕರು ಗಾಯಗೊಂಡಿದ್ದಾರೆ.

ಗಂಭೀರ ಗಾಯಾಳುಗಳನ್ನು ತಕ್ಷಣವೇ ಹಾಸನ ಹಾಗೂ ಮಂಗಳೂರು ಆಸ್ಪತ್ರೆಗೆ ರವಾನಿಸಲಾಯಿತು. ಇತರ ಗಾಯಾಳುಗಳಿಗೆ ಸಕಲೇಶಪುರದ ಕ್ರಾಫರ್ಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸಂಕ್ರಾಂತಿಗೆ ರಾಜಕೀಯ ವಿಪ್ಲವ : ಕೋಡಿಶ್ರೀ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ರಾಜ್ಯ ಮತ್ತು ದೇಶದ ಭವಿಷ್ಯದ ಬಗ್ಗೆ ಆಘಾತಕಾರಿ ಭವಿಷ್ಯವನ್ನು ನುಡಿದಿದ್ದಾರೆ. ಸಂಕ್ರಾಂತಿ ಬಳಿಕ ರಾಜ್ಯದಲ್ಲಿ ರಾಜಕೀಯ ವಿಪ್ಲವದ ಲಕ್ಷಣಗಳು ಕಾಣಿಸಲಿವೆ ಎಂದು ಶ್ರೀಗಳು ಎಚ್ಚರಿಸಿದ್ದಾರೆ.

ಭಾರತದಲ್ಲಿ ಊಹಿಸಲಾಗದ ದುಃಖ ಮತ್ತು ರಾಜಕೀಯ ಗೊಂದಲ ಉಂಟಾಗಲಿದೆ. ಮೇಘ ಸ್ಫೋಟ, ಯುದ್ಧ, ಅರಸನಾಲಯಕ್ಕೆ ಕಾರ್ಮೋಡ ಕವಿಯಲಿದೆ ಎಂದು ಶ್ರೀಗಳು ಹೇಳಿದರು. ಜನವರಿ 2026ರ ಸಂಕ್ರಾತಿ ಒಳಗೆ ಮೇಘ ಸ್ಫೋಟ, ಜಲಸ್ಫೋಟ, ವಾಯು ಮತ್ತು ಭೂ ಪ್ರಳಯದಂತಹ ವಿಕೋಪಗಳು ಸಂಭವಿಸಲಿವೆ. ಕೊರೊನಾ ಇನ್ನೊಂದು ರೂಪದಲ್ಲಿ ಕಾಣಿಸಿಕೊಳ್ಳಲಿದೆ, ಆದರೆ ಸಾವು-ನೋವು ಕಡಿಮೆಯಾದರೂ ಸಮಸ್ಯೆ ಮುಂದುವರಿಯಲಿದೆ.



ಜಗತ್ತು ಊಹಿಸಲಾರದ ದುಃಖ ಅನುಭವಿಸುತ್ತದೆ. ಪ್ರಕೃತಿದತ್ತವಾಗಿ ಮೇಘ ಸ್ಫೋಟ ಆಗುತ್ತದೆ. ಜನಜೀವನ ಅಸ್ತಿರವಾಗುತ್ತೆ, ಯಾವಾಗ ಮನೆಗೆ ಬರ್ತಾರೆ ಹೋಗ್ತಾರೆ ಎಂದು ಹೇಳುವುದು ಕಷ್ಟ ಎಂದು ನುಡಿದರು.

ಜನವರಿ ಒಳಗೆ ಒಂದು ದೊಡ್ಡ ಗಂಡಾಂತರವಿದೆ. ಭಾರತ ಮಾತ್ರವಲ್ಲದೆ ವಿಶ್ವವೇ ಬೆಚ್ಚಿ ಬೀಳುತ್ತದೆ, ಅದರ ಪರಿಣಾಮವನ್ನು ಹೇಳಲೂ ಭಯವಾಗುತ್ತದೆ ಇದಕ್ಕೆ ಭಗವಂತನ ಧ್ಯಾನವೊಂದೇ ಪರಿಹಾರ. ರಾಜ್ಯದಲ್ಲಿ ಮೇಘ ಸ್ಫೋಟ, ರಾಜಕೀಯ ವಿಪ್ಲವವಾಗುತ್ತದೆ. ನಿರೀಕ್ಷೆಗೂ ಮೀರಿದ ಆಘಾತ ಭಾರತಕ್ಕೆ ಬರಲಿದೆ ಎಂದು ಭವಿಷ್ಯ ನುಡಿದರು.

ಅಕಾಲದಲ್ಲಿ ಮಳೆಯಾದರೆ ಸಕಾಲದಲ್ಲಿ ಸಮಸ್ಯೆಯಾಗುತ್ತದೆ. ಬೇಕಾದಾಗ ಮಳೆ ಬರುವುದಿಲ್ಲ. ಜಗತ್ತಿಗೆ ಜಳ ಪ್ರಳಯ ಇದೆ. ಸಾಗರದಲ್ಲಿ ಒಂದು ಅಚ್ಚರಿಯ ಸಂಗತಿ ಕಾಣುತ್ತದೆ. ಜಲಸ್ಫೋಟವಾಗುವ ಲಕ್ಷಣಗಳಿವೆ. ಕೆಲವೊಂದನ್ನು ಹೇಳಲು ಹೆದರಿಕೆ ಆಗುತ್ತದೆ. ಯಾವ ಪೂಜೆ ಪುನಸ್ಕಾರದಿಂದ ಉಪಯೋಗವಿಲ್ಲ. ನೇರವಾಗಿ ಭಗವಂತನ ಧ್ಯಾನ ಮಾಡಬೇಕು ಎಂದರು.

**‘ಸೂಳೆಯ ಮಗನುಟ್ಟಿ ಆಳುವನು ಮುನಿಪುರವ ಯುದ್ಧವಿಲ್ಲದ ಮುಡಿಯೆ ಪುರವೆಲ್ಲ ಕೂಳಾದೀತು’**

ವಿಷ್ಣು ವಾಮಾವತಾರದಲ್ಲಿ ಭೂಮಿಯನ್ನು ಕೇಳುತ್ತಾನೆ. ಅದಕ್ಕೆ ವಾಮನನ್ನು ವಿಷ್ಣು ತುಳಿದು ಸಾಯಿಸುತ್ತಾನೆ. ಆ ಜಾಗವೇ ಇಂದಿನ ಅಮೆರಿಕ. ಅಮೆರಿಕಾವನ್ನು ಮುನಿಪುರ ಎಂದು ಕರೆಯುತ್ತಾರೆ. ಅಲ್ಲಿ ಇನ್ನೂ ಏನೇನೋ ಘಟಿಸುತ್ತದೆ. ಅದರ ಬಗ್ಗೆ ಶ್ರಾವಣ ಬಳಿಕ ಹೇಳುತ್ತೇನೆ ಎಂದು ಹೇಳಿದರು.

ಆಘಾತಕಾರಿ ಘಟನೆಗಳಿಂದ ಕೆಲವು ದೇಶಗಳು ಮುಳುಗುತ್ತವೆ ಎಂದು ಹಿಂದೆಯೇ ಹೇಳಿದ್ದೆ. ಅದು ಈಗ ಆಗುತ್ತಿದೆ. ಕೊರೊನಾ ಈ ಸಂವತ್ಸರದಲ್ಲಿದೆ. ಅದರಿಂದ ಸಾವು-ನೋವು ಕಡಿಮೆ ಇದ್ದರೂ ಮನುಷ್ಯರಿಗೆ ಉಸಿರಾಟದ ಸಮಸ್ಯೆ ಇದ್ದೇ ಇರುತ್ತದೆ ಎಂದರು.

**ಸೋಮಣ್ಣ ಶ್ರೀ ಮಠದ ಭಕ್ತ**

ವಿ. ಸೋಮಣ್ಣ ಅವರು ಕೋಡಿಮಠದ ಪರಮ ಭಕ್ತರು. ಅವರು ಆರಂಭದಲ್ಲಿ ಜನತಾ ಬಜಾರ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಇಲ್ಲಿಗೆ ಬರುತ್ತಿದ್ದರು. ಇಲ್ಲಿಯೇ ಉಳಿದುಕೊಳ್ಳುತ್ತಿದ್ದರು. ಸಂಸದರಾಗಿ ಆಯ್ಕೆಯಾದ ಬಳಿಕ ಮಠಕ್ಕೆ ಬಂದಿರಲಿಲ್ಲ. ಈ ಬಗ್ಗೆ ಅವರೇ ಹೇಳಿದ್ದಾರೆ. ಜೀವನದಲ್ಲಿ ಈ ಮಠವನ್ನು ಎಂದಿಗೂ ಮರೆಯುವುದಿಲ್ಲ. ನಾನು ಭಕ್ತಿಯಿಂದ ಬಂದಿದ್ದೇನೆ, ಮಂತ್ರಿಯಾಗಿ ಅಲ್ಲ ಎಂದು ಸೋಮಣ್ಣ ಅವರೇ ಹೇಳಿದರೆಂದು ಶ್ರೀಗಳು ತಿಳಿಸಿದರು.

ಮೋಡ ಬಂದು ಹೋಗುವ ಹಾಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಷ್ಟಗಳು ಬಂದು ಹೋಗುತ್ತವೆ ಅಷ್ಟೇ. ಅದರಿಂದ ಅವರಿಗೆ ಯಾವ ತೊಂದರೆಯೂ ಇಲ್ಲ ಎಂದರು.

# ದಿಡಗ ಗ್ರಾಮದಲ್ಲಿಲ್ಲ ಸುಸಜ್ಜಿತ ಬಸ್ ನಿಲ್ದಾಣ

## ಪ್ರಮುಖ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ಕೇಂದ್ರ | ಪ್ರಯಾಣಿಕರ ಗೋಳು ಹೇಳತೀರದು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಆರ್ಥಿಕ ಚಟುವಟಿಕೆಗಳಿಂದ ತಾಲ್ಲೂಕಿನ ಗಮನ ಸೆಳೆಯುತ್ತಿರುವ ದಿಡಗ ಗ್ರಾಮದಲ್ಲಿ ಸುಸಜ್ಜಿತ ಬಸ್ ನಿಲ್ದಾಣವಿಲ್ಲದೆ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದು ಕೆಸರು ಗುಂಡಿಯಿಂದ ಆವೃತವಾಗಿರುವ ತಾತ್ಕಾಲಿಕ ಬಸ್ ನಿಲ್ದಾಣ ಸಮಸ್ಯೆಗಳ ಮಹಾಪೂರವನ್ನೇ ಹೊತ್ತಿದೆ.

ಗ್ರಾಮ ಪಂಚಾಯಿತಿ ಕೇಂದ್ರವಾಗಿರುವ ದಿಡಗ ಗ್ರಾಮವು ತಾಲ್ಲೂಕಿನ ಗಡಿ ಭಾಗದಲ್ಲಿದ್ದು ತಾಲ್ಲೂಕು ಕೇಂದ್ರಗಳಾದ ತಿಪಟೂರು, ತುರುವೇಕೆರೆ, ನಾಗಮಂಗಲ ಹಾಗೂ ಅರಸೀಕೆರೆ ಸೇರಿ ಪ್ರಮುಖ ಪಟ್ಟಣ ಪ್ರದೇಶಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಕೇಂದ್ರವಾಗಿದೆ.

ಇಲ್ಲಿನ ತಾತ್ಕಾಲಿಕ ಬಸ್ ನಿಲ್ದಾಣದಿಂದ ತಾಲ್ಲೂಕು ಸೇರಿ ಬೆಂಗಳೂರು, ಊಟಿ, ಪಿರಿಯಾಪಟ್ಟಣ ಹಾಗು ಮೈಸೂರಿಗೆ ಪ್ರತಿದಿನ ಹತ್ತಾರು ಬಸ್‌ಗಳು ಸಂಚರಿಸುತ್ತವೆ. ಸದ್ಯ ಒಕ್ಕಲಿಗರ ಸಂಘಕ್ಕೆ ಸೇರಲಿದೆ ಎನ್ನಲಾದ ಜಾಗದಲ್ಲಿ ತಾತ್ಕಾಲಿಕ ಬಸ್ ನಿಲ್ದಾಣದ ವ್ಯವಸ್ಥೆ ಮಾಡಲಾಗಿದೆ. ಇಲ್ಲಿಯೂ ಸಹ ಪ್ರಯಾಣಿಕರಿಗೆ ನೀರು, ನೆರಳು, ಶೌಚಾಲಯ ಸೇರಿ ಮೂಲಸೌಕರ್ಯಗಳಿಲ್ಲ.



> ಪ್ರಗತಿಯತ್ತ ಸಾಗುತ್ತಿರುವ ದಿಡಗ ಗ್ರಾಮಕ್ಕೆ ಸುಸಜ್ಜಿತ ಬಸ್ ನಿಲ್ದಾಣದ ಅಗತ್ಯವಿದೆ. ಸದ್ಯಕ್ಕಿರುವ ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ನೀರು, ನೆರಳು ಸೇರಿ ಯಾವ ಸೌಕರ್ಯವೂ ಇಲ್ಲ. ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯವಿಲ್ಲ. ಪ್ರಯಾಣಿಕರು ಮಳೆ, ಚಳಿ ಎನ್ನದೆ ಬಯಲು ಪ್ರದೇಶದಲ್ಲೇ ನಿಲ್ಲುವಂತಾಗಿದೆ.
>
> **- ನಾಗರತ್ನಮ್ಮ**
> **ರೈತ ಸಂಘ ಮಹಿಳಾ ಘಟಕ ತಾಲ್ಲೂಕು ಅಧ್ಯಕ್ಷೆ**

> 1994ರಲ್ಲಿಯೇ ಸ್ಥಳಿಯ ರಾಜಕೀಯ ಮುಖಂಡರು, ಸಾರ್ವಜನಿಕರ ಸಮ್ಮುಖದಲ್ಲಿ ಅಂದಿನ ಜಿಲ್ಲಾಧಿಕಾರಿ ಮಧು ಅವರು ಜಾಗವನ್ನು ಸಾರಿಗೆ ಬಸ್ ನಿಲ್ದಾಣಕ್ಕೆಂದು ಗುರುತಿಸಿದ್ದರು. ವರ್ಷದಿಂದ ವರ್ಷಕ್ಕೆ ಹೋಬಳಿ ಮಟ್ಟಕ್ಕೆ ಬೆಳೆಯುತ್ತಿರುವ ದಿಡಗ ಗ್ರಾಮಕ್ಕೆ ಸೂಕ್ತ ಹಾಗು ಸುಸಜ್ಜಿತ ಬಸ್‌ನಿಲ್ದಾಣದ ಅಗತ್ಯವಿದೆ.
>
> **- ಎನ್.ಎನ್. ನಾಗರಾಜ್,**
> **ನರಿಹಳ್ಳಿ ಗ್ರಾಮಸ್ಥ**

ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ಪ್ರತಿದಿನ ರಾತ್ರಿ ವೇಳೆ ಸುಮಾರು 9ಕ್ಕೂ ಹೆಚ್ಚು ಸಾರಿಗೆ ಬಸ್‌ಗಳು ನಿಲ್ಲುತ್ತವೆ. ಸಾರಿಗೆ ಸಿಬ್ಬಂದಿಗೆ ವಿಶ್ರಾಂತಿ ಕೊಠಡಿ, ಶೌಚಾಲಯ, ಕುಡಿಯುವ ನೀರು, ಬೆಳಕಿನ ವ್ಯವಸ್ಥೆ ಸೇರಿ ಯಾವ ಸೌಲಭ್ಯಗಳಿಲ್ಲ. ಸದ್ಯಕ್ಕೆ ಇರುವ ತಾತ್ಕಾಲಿಕ ನಿಲ್ದಾಣಕ್ಕೆ ಕಾಂಪೌಂಡ್ ಇಲ್ಲ. ಒಟ್ಟಾರೆ ಸುರಕ್ಷತೆಯೇ ಇಲ್ಲದಾಗಿದೆ.

ಸ್ಥಳೀಯ ಗ್ರಾಮ ಪಂಚಾಯಿತಿ ವತಿಯಿಂದ ಸದ್ಯಕ್ಕೆ ಇಲ್ಲಿ ಒಂದು ಶೌಚಾಲಯ ನಿರ್ಮಿಸಿದ್ದು ಸಾರಿಗೆ ಸಿಬ್ಬಂದಿ ಬಳಕೆ ಮಾಡಿಕೊಳ್ಳುತಿದ್ದಾರೆ. ಆದರೆ ಸೂಕ್ತ ನಿರ್ವಹಣೆ ಇಲ್ಲದ ಕಾರಣ ಒಲ್ಲದ ಮನಸ್ಸಿನಿಂದ ಉಪಯೋಗಿಸುತ್ತಿದ್ದೇವೆ ಎಂದು ಸಿಬ್ಬಂದಿಯೊಂಬ್ಬರು ಅಳಲು ತೋಡಿಕೊಂಡರು.

ಸದ್ಯದ ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ನೀರು, ನೆರಳಿನ ವ್ಯವಸ್ಥೆ ಇಲ್ಲ. ಸಾರಿಗೆ ಬಸ್‌ಗಳು ನಿಲ್ದಾಣಕ್ಕೆ ಬರುವವರೆಗೂ ಅಂಗಡಿ-ಮುಂಗಟ್ಟುಗಳ ಮುಂದೆ ಕಾದು ನಿಲ್ಲಬೇಕಾಗಿದೆ.

ಇನ್ನು ಇಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲದ ಕಾರಣ ಮಹಿಳೆಯರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಮೊಳ್ಳಹಳ್ಳಿ ಗ್ರಾಮದ ಯಶೋಧಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ಮಳೆ ನೀರು ಸಂಗ್ರಹಗೊಳ್ಳುತ್ತದೆ. ಸಾರಿಗೆ ಬಸ್ ಹಾಗೂ ಖಾಸಗಿ ವಾಹನಗಳು ಸಂಚರಿಸಿದಂತೆಲ್ಲ ಕೆಸರು ಗದ್ದೆಯಂತಾಗುತ್ತದೆ. ಇದರಿಂದ ಓಡಾಡಲು ಕಿರಿಕಿರಿಯಾಗಲಿದೆ ಎಂಬುದು ಪ್ರಯಾಣಿಕರ ದೂರಾಗಿದೆ. ಸ್ವಲ್ಪ ಮಳೆಯಾದರೂ ಕೆಸರು ಗದ್ದೆಯಂತಾಗುವ ಪ್ರದೇಶದಲ್ಲಿ ಓಡಾಟ ನಡೆಸಬೇಕು.

### ವಾದ-ವಿವಾದ

ಒಕ್ಕಲಿಗರ ಸಂಘಕ್ಕೆಂದು ಕಾಯ್ದಿರಿಸಿರುವ ಜಾಗದಲ್ಲಿಯೇ ಬಸ್ ನಿಲ್ದಾಣ ನಿರ್ಮಿಸಿದರೆ ಅನುಕೂಲವಾಗಲಿದೆ. ಎಲ್ಲಿಯೋ ದೂರದಲ್ಲಿ ನಿರ್ಮಿಸಿದರೆ ಪ್ರಯಾಣಿಕರಿಗೆ ಸಮಸ್ಯೆಯಾಗಲಿದೆ ಎಂಬುದು ಕೆಲವರ ವಾದ. ಆದರೆ ಈ ಜಾಗವು ಒಕ್ಕಲಿಗರ ಸಂಘದ ಕಟ್ಟಡ ನಿರ್ಮಾಣದ ಜೊತೆಗೆ ಪಕ್ಕದ ಹೆರಿಗೆ ಆಸ್ಪತ್ರೆಯ ಅಭಿವೃದ್ಧಿಗೂ ಅನುಕೂಲವಾಗಲಿದೆ. 1994 ರಲ್ಲಿಯೇ ಅಂದಿನ ಜಿಲ್ಲಾಧಿಕಾರಿ ಗುರುತಿಸಿರುವ ಜಾಗದಲ್ಲಿ ಬಸ್‌ನಿಲ್ದಾಣ ನಿರ್ಮಿಸಿದರೆ ಗ್ರಾಮದ ಬೆಳವಣಿಗೆ ಹಾಗು ಅಭಿವೃದ್ಧಿಗೆ ಅನುಕೂಲವಾಗಲಿದೆ. ಸುಮಾರು 600 ಮೀಟರ್ ದೂರದ ಅಂದರೆ ಈಗಾಗಲೇ ಗುರುತಿಸಿರುವ ಜಾಗದಲ್ಲಿ ಬಸ್ ನಿಲ್ದಾಣ ನಿರ್ಮಿಸಿದರೆ, ಸಾರಿಗೆ ಬಸ್‌ಗಳು ಆಯಾ ಮಾರ್ಗದಲ್ಲಿ ತೆರಳುವ ಸಲುವಾಗಿ ನಿಲ್ದಾಣದಿಂದ ಗ್ರಾಮದ ಡಾ. ರಾಜ್ ವೃತ್ತಕ್ಕೆ ಆಗಮಿಸಲಿದ್ದು ಪ್ರಯಾಣಿಕರಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂಬುದು ಹಲವರ ಮಾತಾಗಿದೆ.

### ಸ್ಥಳ ಪರಿಶೀಲಿಸಿದ್ದ ಜಿಲ್ಲಾಧಿಕಾರಿ

1994ರಲ್ಲಿ ಸ್ಥಳೀಯ ರಾಜಕೀಯ ಮುಖಂಡರು, ಸಾರ್ವಜನಿಕರ ಒತ್ತಾಯದ ಮೇರೆಗೆ ಅಂದಿನ ಜಿಲ್ಲಾಧಿಕಾರಿ ಮಧು ಅವರು ಗ್ರಾಮದ ಇಂದಿನ ಬಿಸಿಎಂ ಹಾಸ್ಟೆಲ್ ಮುಂಭಾಗ ಅಂದರೆ ಓವರ್ ಹೆಡ್ ಟ್ಯಾಂಕ್ ಸುತ್ತಲಿನ ಒಂದಷ್ಟು ಜಾಗವನ್ನು ಸಾರಿಗೆ ಬಸ್ ನಿಲ್ದಾಣಕ್ಕೆಂದು ಗುರುತಿಸಿದ್ದರು. ಆದರೆ ಆ ನಿಟ್ಟಿನಲ್ಲಿ ಯಾವ ಕೆಲಸವೂ ಆಗಲಿಲ್ಲ ಎಂದು ನರಿಹಳ್ಳಿ ಗ್ರಾಮದ ಎನ್.ಎನ್.ನಾಗರಾಜ್ ತಿಳಿಸಿದರು.



### ದಿಕ್ಕು ತಪ್ಪಿಸುವ ಕೆಲಸ

ದಿಡಗ ಗ್ರಾಮದಲ್ಲಿ ಸೂಕ್ತ ಹಾಗು ಸುಸಜ್ಜಿತ ಬಸ್ ನಿಲ್ದಾಣ ನಿರ್ಮಾಣ ಆಗಬೇಕು ಎಂಬುದು ಸ್ಥಳೀಯರ ಹಲವು ವರ್ಷಗಳ ಬೇಡಿಕೆ. ಜನಪ್ರತಿನಿಧಿಗಳಿಗೆ ಹಾಗೂ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಮಾಡಲಾಗಿದೆ. ಇದಕ್ಕೆ ಜನಪ್ರತಿನಿಧಿಗಳು ಸ್ಪಂದಿಸಿ ಅಧಿಕಾರಿಗಳು ಸ್ಥಳ ಪರಿಶೀಲನೆಗೆಂದು ಕಳೆದ 7 ವರ್ಷಗಳಲ್ಲಿ 2-3 ಬಾರಿ ಆಗಮಿಸಿದ್ದಾರೆ. ಆದರೆ ಕೆಲ ವ್ಯಕ್ತಿಗಳು ಅವರ ರಾಜಕೀಯ ಪ್ರಭಾವ ಬಳಸಿ ಅಧಿಕಾರಿಗಳ ದಿಕ್ಕು ತಪ್ಪಿಸಿ ಹಿಂದೆ ಸರಿಯುವಂತೆ ಮಾಡಿದ್ದಾರೆ ಎಂಬುದು ಸ್ಥಳೀಯರ ಆರೋಪವಾಗಿದೆ.

# ವಸತಿ ಮೀಸಲಾತಿ ವಿರೋಧಿಸಿ ಪ್ರತಿಭಟನೆ



ಸಕಲೇಶಪುರ: ರಾಜ್ಯ ಸರ್ಕಾರದ ವಸತಿ ಯೋಜನೆಯಡಿ ಅಲ್ಪಸಂಖ್ಯಾತ ಮುಸ್ಲಿಮರಿಗೆ ಶೇ. 10 ರಿಂದ ಶೇ. 15ಕ್ಕೆ ಮೀಸಲಾತಿ ಹೆಚ್ಚಿಸಿರುವ ನಿರ್ಣಯವು ಸಂವಿಧಾನ ವಿರೋಧಿಯಾಗಿದೆ ಎಂದು ಆರೋಪಿಸಿ ಹಿಂದು ಹಿತರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಧರ್ಮ ಹಾಗೂ ಮತದ ಆಧಾರದ ಮೇಲೆ ಯಾವುದೇ ಮೀಸಲಾತಿ ನೀಡಬಾರದು ಎಂಬುದನ್ನು ಸಂವಿಧಾನ ಪ್ರತಿಪಾದಿಸುತ್ತದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯಗಳನ್ನೇ ಗಾಳಿಗೆ ತೂರಿರುವ ರಾಜ್ಯ ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ಈ ನಿರ್ಣಯವು ದಲಿತರು, ಬಡವರು ಮತ್ತು ಹಿಂದುಳಿದವರಿಗೆ ಅನ್ಯಾಯ ಉಂಟುಮಾಡಲಿದೆ ಎಂದು ಪ್ರತಿಭಟನಾಕಾರರು ದೂರಿದರು.

ಎಲ್ಲಾ ಜಾತಿಗಳಲ್ಲೂ ಕೂಲಿ ಕಾರ್ಮಿಕರು ಮತ್ತು ಕಡುಬಡವರು ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಇಂತಹವರಿಗೆ ಅನ್ಯಾಯವಾಗದಂತೆ ಈ ಮೀಸಲಾತಿ ರದ್ದುಗೊಳಿಸಬೇಕು. ಕಾಂಗ್ರೆಸ್ ಸರ್ಕಾರವು ಮುಸ್ಲಿಮ್ ತುಷ್ಟೀಕರಣಕ್ಕಾಗಿ ಈ ನಿರ್ಣಯ ತೆಗೆದುಕೊಂಡಿದೆ. ಶೇ. 50ಕ್ಕಿಂತ ಹೆಚ್ಚು ಜನರು ಸ್ವಂತ ಮನೆ ಇಲ್ಲದೆ ಒದ್ದಾಡುತ್ತಿರುವಾಗ ಇದು ಬಡವರಿಗೆ ಅನ್ಯಾಯವಾಗಲಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಈ ನಿರ್ಣಯವನ್ನು ರಾಜ್ಯಪಾಲರು ತಿರಸ್ಕರಿಸದಿದ್ದರೆ, ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ವೇದಿಕೆಯ ಅಧ್ಯಕ್ಷ ಕಬ್ಬಿನಗದ್ದೆ ಮಂಜುನಾಥ್, ಸಂಚಾಲಕರಾದ ಶಿವು ಜಿಪ್ಪಿ, ಹೆಬ್ಬಸಾಲೆ ರವಿ, ಬಿಜೆಪಿ ಮುಖಂಡರಾದ ದುಷ್ಯಂತ್ ಗೌಡ, ಹರೀಶ್ ಗೌಡ, ಆಟೋ ಲೋಕೇಶ್, ಸುಪ್ರೀತ್, ಸಂತೋಷ್, ದಿಲೀಪ್ ಕೆರೋಡಿ ಮತ್ತಿತರರು ಭಾಗವಹಿಸಿದ್ದರು. ಉಪವಿಭಾಗಾಧಿಕಾರಿ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

# ಜೆ.ಪಿ. ನಗರದಲ್ಲಿ ತಾತ್ಕಾಲಿಕ ಅಂಬೇಡ್ಕರ್ ವಸತಿ ಶಾಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ವಿಧಾನಸಭಾ ಕ್ಷೇತ್ರದ ಜಾವಗಲ್ ಹೋಬಳಿಗೆ ಸರ್ಕಾರದಿಂದ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗೆ ಅವಕಾಶ ನೀಡಲಾಗಿದ್ದು, ಜಾವಗಲ್‌ನಲ್ಲಿ ನೂತನ ಕಟ್ಟಡ ನಿರ್ಮಾಣವಾಗುವ ತನಕ ಬೇಲೂರು ಪಟ್ಟಣದ ಜೆ.ಪಿ. ನಗರದಲ್ಲಿ ತರಗತಿ ನಡೆಸಲಾಗುತ್ತದೆ ಎಂದು ಶಾಸಕ ಹೆಚ್.ಕೆ. ಸುರೇಶ್ ಹೇಳಿದರು.

ಪಟ್ಟಣದ ಜೆ.ಪಿ. ನಗರದಲ್ಲಿ ನೂತನವಾಗಿ ಆರಂಭವಾದ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗೆ ಚಾಲನೆ ನೀಡಿ ಮಾತನಾಡಿದ ಅವರು, ಈಗಾಗಲೇ ಜಾವಗಲ್ ಹೋಬಳಿ ಸಿಂಗನಹಳ್ಳಿ ಬಳಿ 10 ಎಕರೆ ಜಾಗ ಅಂಬೇಡ್ಕರ್ ವಸತಿ ಶಾಲೆ ನಿರ್ಮಾಣಕ್ಕೆ ಮೀಸಲಿಟ್ಟಿದೆ. ಕಟ್ಟಡ ನಿರ್ಮಾಣ ತಡವಾಗುವ ಹಿನ್ನೆಲೆಯಲ್ಲಿ ಶೀಘ್ರವೇ ವಸತಿ ಶಾಲೆಯನ್ನು ಆರಂಭಿಸಬೇಕು ಎಂಬ ಸಂಕಲ್ಪದಿದ ಪಟ್ಟಣದ ಜೆ.ಪಿ.



ನಗರದಲ್ಲಿನ ವಸತಿ ಶಾಲೆಯಲ್ಲಿ ನಡೆಸಲು ಇಂದು ಚಾಲನೆ ನೀಡಲಾಗಿದೆ. ಸದ್ಯ 6ನೇ ತರಗತಿಗೆ 41 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. 6ನೇ ತರಗತಿಯಿಂದ 10ನೇ ತರಗತಿ ತನಕ ಹಂತ-ಹತವಾಗಿ ತರಗತಿ ನಡೆಸಲಾಗುತ್ತದೆ. ಅನುಭವಿ ಶಿಕ್ಷಕರನ್ನು ಹೊಂದಿರುವ ಅಂಬೇಡ್ಕರ್ ವಸತಿ ಶಾಲೆಗೆ ಮಕ್ಕಳನ್ನು ದಾಖಲಿಸಬೇಕು ಎಂದು ಮನವಿ ಮಾಡಿದರು.

ಜೆ.ಪಿ. ನಗರದಲ್ಲಿನ ವಸತಿ ಶಾಲೆ ಸುಸಜ್ಜಿತವಾಗಿದೆ. ಇಲ್ಲಿನ ಪರಿಸರ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಪೂರಕವಾಗಿದೆ. ಈ ಮೊದಲು ಬಂಟೇನಹಳ್ಳಿಯಲ್ಲಿ ವಸತಿ ಶಾಲೆಯನ್ನು ಆರಂಭಿಸಲು ಒತ್ತಡ ಬಂದಿದ್ದು, ಅಧಿಕಾರಿಗಳು ಸೂಕ್ತವಾಗಿ ಪರೀಕ್ಷಿಸಿ ಉತ್ತಮ ವಸತಿ ಶಾಲೆಯನ್ನು ಗುರುತಿಸಿದ್ದಾರೆ ಎಂದರು.

ತಂದೆ-ತಾಯಿ ಇಡೀ ಕುಟುಂಬವನ್ನು ಬಿಟ್ಟು ಬಂದ ಮಕ್ಕಳಿಗೆ ಇಲ್ಲಿನ ಶಿಕ್ಷಕರು, ವಾರ್ಡನ್‌ಗಳೇ ಪೋಷಕರಾಗಿ ಪಾಲನೆ ಮಾಡಬೇಕಿದೆ. ಸ್ವಚ್ಛತೆ ಮತ್ತು ನೈರ್ಮಲ್ಯಕ್ಕೆ ಆದ್ಯತೆ ನೀಡಿ, ಪ್ರತಿನಿತ್ಯ ಶುಚಿ-ರುಚಿಯುಕ್ತದಿಂದ ಆಹಾರ ನೀಡಬೇಕು. ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆ ಜೊತೆಗೆ ದೈಹಿಕ ಆರೋಗ್ಯ ಕಾಪಾಡಲು ತರಕಾರಿಗಳು ದಾನ್ಯಗಳನ್ನು ನೀಡಿ, ಸರ್ಕಾರ ಮತ್ತು ಸಂಬಂಧ ಪಟ್ಟ ಇಲಾಖೆಯಿಂದ ನೀಡುವ ಸವಲತ್ತು ವಿತರಿಸಬೇಕು.

ನಾವು ದಿಢೀರ್ ಭೇಟಿ ನೀಡಿದ ಸಂದರ್ಭದಲ್ಲಿ ಅವ್ಯವಸ್ಥೆ ಕಂಡುಬಂದರೆ ಯಾವ ಕಾರಣಕ್ಕೂ ಸಹಿಸುವುದಿಲ್ಲ. ಇಲ್ಲಿನ ಮಕ್ಕಳು ಮುಂದಿನ ದಿನದಲ್ಲಿ ಅಂಬೇಡ್ಕರ್, ಸುಭಾಷ್ ಚಂದ್ರಬೋಸ್, ಗಾಂಧಿ ತರಹದ ವ್ಯಕ್ತಿಗಳನ್ನು ರೂಪಿಸಲು ಶಕ್ತಿ ನಿಮಗೆ ಇದೆ. ಬೇಲೂರು ಮೂರಾರ್ಜಿ ದೇಸಾಯಿ ಶಾಲೆಯಲ್ಲಿ 2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 100 ರಷ್ಟು ಅಂಕ ಪಡೆದ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ತಹಶೀಲ್ದಾರ್ ಎಂ. ಮಮತ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ವಸಂತಕುಮಾರ್, ಪುರಸಭಾ ಅಧ್ಯಕ್ಷೆ ಉಷಾ ಸತೀಶ್, ಮುಖ್ಯಾಧಿಕಾರಿ ಬಸವರಾಜ್ ಕಾಟಪ್ಪ ಶಿಗ್ಗಾವಿ, ಮುಖ್ಯ ಶಿಕ್ಷಕ ಸತೀಶ್, ಪುರಷೋತ್ತಮ್, ಇರ್ಷಾದ್ ಪಾಷ ಇತರರಿದ್ದರು.

# 147 ಗ್ರಾಂ ಚಿನ್ನಾಭರಣ ಕಳವು

ಹಾಸನ: ಕೋರಿಯರ್ ಮೂಲಕ ಕಳುಹಿಸಿದ್ದ 147 ಗ್ರಾಂ ಚಿನ್ನಾಭರಣದ ಬಾಕ್ಸ್ ಕಳುವಾಗಿದ್ದು ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಪಿಟಿಪಿಸಿ ಕೋರಿಯರ್‌ನ ನಿಶಾಂತ್ ಎಂಬುವವರು ದೂರು ದಾಖಲಿಸಿದ್ದಾರೆ.ನಗರದ ವೈಟ್ ಗೋಲ್ಡ್ ಕಂಪನಿಯವರು ಪಾರ್ಸಲ್ ಕಳುಹಿಸಿದ್ದರು. ಅದನ್ನು ಬೆಂಗಳೂರಿನ ಸಂಗೀತ ಲಾಜಿಸ್ಟಿಕ್ಸ್ ಕೊರಿಯರ್ ಕಂಪನಿಗೆ ನಿಶಾಂತ್ ಕಳುಹಿಸಿದ್ದರು. ಪ್ರತಿದಿನ ಕೊರಿಯರ್ ಸಂಸ್ಥೆಯಲ್ಲಿ ಪಡೆಯುವ ಪಾರ್ಸಲ್‌ಗಳನ್ನು ತಮ್ಮ ವಾಹನದಲ್ಲೇ ಕಳುಹಿಸುತ್ತಿದ್ದರು. ಜೂ. 16ರಂದು ವೈಟ್ ಗೋಲ್ಡ್ ಕಂಪನಿಯವರ ಪಾರ್ಸಲ್ ಅನ್ನು ಕಳುಹಿಸಿ ಕೊರಿಯರ್ ರಸೀದಿ ಸಂಖ್ಯೆ ಪಡೆದು ಉದ್ಯೋಗಿ ಸಮಂತ್‌ಗೆ ಕೊಡಲಾಗಿತ್ತು. ಚಾಲಕ ಆನಂದ್ ಹಾಸನದಿಂದ ಪಾರ್ಸ್‌ಲ್ ಅನ್ನು ತುಂಬಿಕೊಂಡು ತೆರಳಿದ್ದರು. ಆದರೆ ಬೆಂಗಳೂರಿಗೆ ತಲುಪಿ ಪರಿಶೀಲಿಸಿದಾಗ ಚಿನ್ನಾಭರಣವಿದ್ದ ಬಾಕ್ಸ್ ಇಲ್ಲದಿರುವುದು ಗೊತ್ತಾಗಿದೆ. ಪೂರ್ತಿ ವಾಹನ ಹುಡುಕಿದರೂ ಪತ್ತೆಯಾಗಿಲ್ಲ. ಬಾಕ್ಸ್ ಅನ್ನು ಯಾರೋ ಕಳವು ಮಾಡಿರಬಹುದು ಅಥವಾ ಮಾರ್ಗಮಧ್ಯೆ ಬಿದ್ದಿರಬಹುದು. ಅದನ್ನು ಹುಡುಕಿ ಕೊಡಬೇಕೆಂದು ಎಫ್ಐಆರ್ ದಾಖಲಿಸಲಾಗಿದೆ.

## ಮಹಿಳೆ ಕೊರಳಿಂದ ಚಿನ್ನ ಎಗರಿಸಿದ ಅಪರಿಚಿತ

ಅರಸೀಕೆರೆ: ಸ್ಕೂಟಿಯಲ್ಲಿ ಹೋಗುತ್ತಿದ್ದ ಮಹಿಳೆಯ ಕೊರಳಿಂದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ತಾಲ್ಲೂಕಿನ ಬೆಂಡೆಕೆರೆ ಗ್ರಾಮದ ಶೆಟ್ಟಿಕಟ್ಟೆ ಅಮ್ಮ ದೇವಸ್ಥಾನದ ಬಳಿ ನಡೆದಿದೆ.

ಮಾಸ್ತಿಹಳ್ಳಿ ಗ್ರಾಮದ ರತ್ನಮ್ಮ ಅವರು ಸೊಸೆ ರುಚಿತಾ ಅವರೊಂದಿಗೆ ಸ್ಕೂಟಿಯಲ್ಲಿ ಅರಸೀಕೆರೆಯಿಂದ ಗ್ರಾಮಕ್ಕೆ ಹೋಗುತ್ತಿದ್ದಾಗ ಹಿಂಬಾಲಿಸಿಕೊಂಡು ಬಂದ ಅಪರಿಚಿತ ಹಿಂದೆ ಕುಳಿತಿದ್ದ ರತ್ನಮ್ಮ ಅವರ ಕೊರಳಿನಿಂದ 7 ಗ್ರಾಂ ತೂಕದ ಅಂದಾಜು 35 ಸಾವಿರ ರೂ. ಬೆಲೆಯ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ. ಬಾಣಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜೂನ್-22

**1975:** ಆಪತ್‌ಕಾಲದ ಘೋಷಣೆ: ಭಾರತದ ಇತಿಹಾಸದಲ್ಲಿ ಅತ್ಯಂತ ತೀವ್ರ ರಾಜಕೀಯ ಬೆಳವಣಿಗೆಯೊಂದಾಗಿ ಪ್ರಧಾನಿ ಇಂದಿರಾ ಗಾಂಧಿ ಅವರು ಜೂ. 25ರಂದು ದೇಶದಲ್ಲಿ ಆಪತ್‌ಕಾಲವನ್ನು ಘೋಷಿಸಿದರು. ಆದರೆ ಇದಕ್ಕೆ ಪೂರ್ವಭಾವಿಯಾಗಿ ಜೂ. 22ರಂದು ಹಲವಾರು ತಯಾರಿಗಳಾಗಿದ್ದವು. ಈ ದಿನ ಪ್ರಮುಖ ವಿರೋಧ ಪಕ್ಷದ ನಾಯಕರು ಬಂಧನಕ್ಕೊಳಗಾದರು.

**1911:** ಜಾರ್ಜ್ 5ರ ಭಾರತ ಭೇಟಿ: ಬ್ರಿಟಿಷ್ ಚಕ್ರವರ್ತಿ ಜಾರ್ಜ್ 5 ಭಾರತಕ್ಕೆ ಭೇಟಿ ನೀಡಿ 1911ರ ಡೆಲ್ಲಿ ದರ್ಬಾರ್‌ಗೆ ಬಂದಿದ್ದರು. 1911ರ ಜೂ. 22 ರಂದು ಬ್ರಿಟಿಷ್ ಚಕ್ರವರ್ತಿ ಪಟ್ಟಕ್ಕೇರಿದರು.

**1941:** ಹಿಟ್ಲರ್ ಸೋವಿಯತ್ ಆಕ್ರಮಣ: ನಾಜಿ ಜರ್ಮನಿಯ ಹಿಟ್ಲರ್ ಸೋವಿಯತ್ ಯೂನಿಯನ್ ಮೇಲೆ ದೊಡ್ಡದಾದ ಆಕ್ರಮಣ ಆರಂಭಿಸಿದ ದಿನ. ಇದನ್ನು ಆಪರೇಶನ್ ಬಾರ್ಬರೋಸಾ ಎಂದು ಕರೆಯುತ್ತಾರೆ. ಈ ಮೂಲಕ ಎರಡನೇ ಮಹಾಯುದ್ಧದ ಗಂಭೀರ ಅಧ್ಯಾಯ ಆರಂಭವಾಯಿತು.

**1633:** ಗ್ಯಾಲಿಲಿಯೊ ಬಂಧನ: ಇಟಾಲಿಯನ್ ವಿಜ್ಞಾನಿ ಗ್ಯಾಲಿಲಿಯೊ ಗ್ಯಾಲಿಲಿ ಅವರನ್ನು ಚರ್ಚ್‌ನ ಇನ್ಕ್ವಿಸಿಷನ್ ನ್ಯಾಯಾಲಯವು ಭೂಮಿಯ ಸೂರ್ಯಚಾರ ಸಿದ್ಧಾಂತದಿಗಾಗಿ ತಪ್ಪಿತಸ್ಥ ಎಂದು ಘೋಷಿಸಿ ಬಂಧನ ವಿಧಿಸಿತು.

### ಜನನ

**1856:** ಹೆನ್ರಿ ರೈಡರ್ ಹೆಗ್ಗಾರ್ಡ್, ಬ್ರಿಟಿಷ್ ಲೇಖಕ

**1898:** ಎರಿಚ್ ಮೇರಿಯಾ ರೆಮಾರ್ಕ್, ಜರ್ಮನ್ ಲೇಖಕ

### ಮರಣ

**1969** ಜುಡಿ ಗಾರ್ಲಂಡ್, ಪ್ರಸಿದ್ಧ ಅಮೆರಿಕದ ನಟಿ ಮತ್ತು ಗಾಯಕಿ

# ಇನ್ನೂ ತಲುಪದ ಈ ತಿಂಗಳ ಪಡಿತರ

## ನ್ಯಾಯಬೆಲೆ ಅಂಗಡಿಗಳಿಗೆ ನಿತ್ಯ ಅಲೆದಾಟ | ಗ್ರಾಹಕರ ಬೇಸರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನ್ಯಾಯಬೆಲೆ ಅಂಗಡಿಗಳಲ್ಲಿ ಈ ತಿಂಗಳ ಪಡಿತರ ವಿತರಣೆಯಲ್ಲಿ ವಿಳಂಬವಾಗಿದ್ದು ಗ್ರಾಹಕರು ನಿತ್ಯ ನ್ಯಾಯ ಬೆಲೆ ಅಂಗಡಿಗೆ ಬಂದು ಬರಿಗೈಯಲ್ಲಿ ವಾಪಾಸ್ಸಾಗುತ್ತಿದ್ದಾರೆ.

ಹಾಸನ ಜಿಲ್ಲೆಗೆ ಅಗತ್ಯ ಅಕ್ಕಿ ಹಾಗೂ ರಾಗಿ ಪದಾರ್ಥ ಸರಬರಾಜು ಆಗಿದೆಯಾದರೂ ಬೇರೆ ಜಿಲ್ಲೆಗಳಲ್ಲಿಗೆ ತಲುಪಲು ವಿಳಂಬವಾಗಿದೆ. ಹೀಗಾಗಿ ಒಂದು ವಾರದ ಮಟ್ಟಿಗೆ ಪದಾರ್ಥ ವಿತರಿಸದಂತೆ ಸರ್ಕಾರದ ನಿರ್ದೇಶನವಿದೆ. ಹೀಗಾಗಿ ಪಡಿತರ ವಿತರಿಸುತ್ತಿಲ್ಲ ಎಂದು ಆಹಾರ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



### ಕಾದು ಕಾದು ಸುಸ್ತು

ಪ್ರತಿ ತಿಂಗಳ 16ನೇ ತಾರೀಖಿನಿಂದ 30ರ ವರೆಗೆ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ವಿತರಿಸುವುದು ವಾಡಿಕೆ. ಆ ಹಿನ್ನೆಲೆಯಲ್ಲಿ ಗ್ರಾಹಕರು ಪಡಿತರಕ್ಕಾಗಿ ಹತ್ತಿರದ ನ್ಯಾಯಬೆಲೆ ಅಂಗಡಿಗಳಿಗೆ ಬಂದು ಕಾದು ಕಾದು ಸುಸ್ತಾಗಿದ್ದಾರೆ. ಬಹುತೇಕ ಅಂಗಡಿಗಳು ಬಾಗಿಲು ಹಾಕಿರುವುದು, ಪಡಿತರ ಇಲ್ಲ ಎಂಬ ಉತ್ತರ ಬರುತ್ತಿರುವುದುರಿಂದ ಆತಂಕಕ್ಕೆ ಸಿಲುಕಿದ್ದಾರೆ. ರಾಜ್ಯ ಸರ್ಕಾರ ಈ ಅವಧಿಯಲ್ಲಿ ಆಡಳಿತಕ್ಕೆ ಬರುತ್ತಲೇ ಅನ್ನಭಾಗ್ಯ ಯೋಜನೆಯನ್ನು ಜಾರಿಗೊಳಿಸಿ ಕುಟುಂಬದ ಒಬ್ಬ ವ್ಯಕ್ತಿಗೆ 10 ಕೆ.ಜಿ. ಅಕ್ಕಿ ನೀಡುತ್ತಿದೆ. ಈ ತಿಂಗಳು ಇನ್ನೂ ತಲುಪದೆ ಇರುವುದು ಗ್ರಾಹಕರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಎರಡರಿಂದ ಮೂರು ಕಿ.ಮೀ. ದೂರದ ವರೆಗೆ ಜನರು ಕಾಲ್ನಡಿಗೆ ಅಥವಾ ಸಾರಿಗೆ ಬಸ್‌ಗಳ ಮೂಲಕ ಪಡಿತರಕ್ಕಾಗಿ ಬಂದು ಬರಿಗೈಯಲ್ಲಿ ವಾಪಾಸ್ಸಾಗುತ್ತಿದ್ದಾರೆ.

### ಅಗತ್ಯ ದಾಸ್ತಾನು ಇದೆ

ಹಾಸನ ಜಿಲ್ಲೆಗೆ ಅಗತ್ಯ ಪಡಿತರ ಪದಾರ್ಥ ಬಂದಿದೆ. ಆದರೆ ಒಂದು ವಾರದ ಮಟ್ಟಿಗೆ ವಿತರಣೆ ಬೇಡ ಎಂಬ ಮೇಲಧಿಕಾರಿಗಳ ಸೂಚನೆ ಇದೆ. ಗ್ರಾಹಕರು ಆತಂಕಪಡುವುದು ಬೇಡ ಎಂದು ಆಹಾರ ಇಲಾಖೆ ಅಧಿಕಾರಿಗಳು ಅಭಯ ನೀಡಿದ್ದಾರೆ.

### ಜಿಲ್ಲೆಯಲ್ಲಿ 880 ನ್ಯಾಯಬೆಲೆ ಅಂಗಡಿ

ಆಲೂರಿನಲ್ಲಿ 44, ಅರಸೀಕೆರೆ 202, ಅರಕಲಗೂಡು 86, ಬೇಲೂರು 86, ಚನ್ನರಾಯಪಟ್ಟಣ 112, ಹಾಸನ 171, ಹೊಳೆನರಸೀಪುರ 118, ಸಕಲೇಶಪುರ ತಾಲ್ಲೂಕಿನಲ್ಲಿ 61 ಸೇರಿ ಜಿಲ್ಲಾದ್ಯಂತ 880 ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ.

### ಬಹುತೇಕ ಜಿಲ್ಲೆಗಳಿಗೆ ದಾಸ್ತಾನಿಲ್ಲ

ಪ್ರತಿ ಬಾರಿ ಮುಂಚಿತವಾಗಿಯೇ ಗೋದಾಮುಗಳಿಗೆ ತಲುಪುತ್ತಿದ್ದ ಪಡಿತರ ಪದಾರ್ಥ ಈ ಬಾರಿ ಬಹುತೇಕ ಜಿಲ್ಲೆಗಳಲ್ಲಿ ತಲುಪುವುದು ವಿಳಂಬವಾಗಿದೆ ಎನ್ನಲಾಗಿದೆ. ದಕ್ಷಿಣ ಕರ್ನಾಟಕದ ಜಿಲ್ಲೆಗಳಿಗೆ ನಿಗದಿಯಂತೆ ಸರಬರಾಜು ಆಗಿದೆಯಾದರೂ ಉತ್ತರ ಕರ್ನಾಟಕ ಭಾಗಕ್ಕೆ ಇನ್ನೂ ಪೂರೈಕೆಯಾಗಿಲ್ಲ. ಮೊದಲಿಗಿಂತ ಈ ಬಾರಿ ಅಕ್ಕಿ ಹೆಚ್ಚಿನ ಪ್ರಮಾಣದಲ್ಲಿ ಬೇಕು. ಅನ್ನಭಾಗ್ಯ ಯೋಜನೆಯಡಿ 5 ಕೆ.ಜಿ.ಗೆ ಪರ್ಯಾಯವಾಗಿ ಸರ್ಕಾರ ಹಣ ನೀಡುತ್ತಿತ್ತು. ಆದರೆ ಕಳೆದ ಮೂರು ತಿಂಗಳಿಂದ ಅಕ್ಕಿಯನ್ನೇ ನೀಡುತ್ತಿರುವುದರಿಂದ ಹೇರಳ ಪ್ರಮಾಣದಲ್ಲಿ ಅಕ್ಕಿ ಬೇಕು. ಜೊತೆಗೆ ಅಕ್ಕಿ ಜೊತೆಗೆ ದಕ್ಷಿಣದ ಜಿಲ್ಲೆಗಳಲ್ಲಿ ರಾಗಿ ವಿತರಿಸಿದರೆ ಉತ್ತರ ಕರ್ನಾಟಕದ ಭಾಗದಲ್ಲಿ ಜೋಳ ನೀಡಲಾಗುತ್ತದೆ. ಈ ವರ್ಷ ಜೋಳ ಅಗತ್ಯ ಪ್ರಮಾಣದಲ್ಲಿ ಲಭ್ಯವಾಗದೆ ಇರುವುದರಿಂದ ಎಲ್ಲವನ್ನೂ ಸರಿದೂಗಿಸಿ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.

> ಪ್ರತಿ ತಿಂಗಳು 18ನೇ ತಾರೀಖಿಗೆ ನ್ಯಾಯಬೆಲೆ ಅಂಗಡಿಯಲ್ಲಿ ಪದಾರ್ಥ ಪಡೆಯುತ್ತಿದ್ದೆ. ಈ ಬಾರಿಯೂ ಅದೇ ನಿರೀಕ್ಷೆಯಲ್ಲಿ ಹೋಗಿದ್ದೆ. ಆದರೆ ಪದಾರ್ಥ ಕೊಡುವುದಿಲ್ಲವೆಂದು ನ್ಯಾಯಬೆಲೆ ಅಂಗಡಿಯವರು ಹೇಳುತ್ತಿದ್ದಾರೆ. ಸಮಸ್ಯೆ ಏನಾಗಿದೆ ಎಂಬುದರ ಕುರಿತು ಸರಿಯಾದ ಮಾಹಿತಿ ನೀಡುತ್ತಿಲ್ಲ. ಅನ್ನಭಾಗ್ಯ ಅಕ್ಕಿಯನ್ನೇ ನಂಬಿರುವ ನಮಗೆ ಸಮಸ್ಯೆಯಾಗಿದೆ.
>
> **- ಶಾಂತಮ್ಮ, ತಮ್ಲಾಪುರ ನಿವಾಸಿ**

### 16,34,359 ಸದಸ್ಯರು

ಹಾಸನ ಜಿಲ್ಲೆಯಲ್ಲಿ 4,28,474 ಬಿಪಿಎಲ್, 23,285 ಅಂತ್ಯೋದಯ ಕಾರ್ಡ್‌ಗಳಿದ್ದು 16,34,359 ಸದಸ್ಯರಿದ್ದಾರೆ. ಆಲೂರಿನಲ್ಲಿ 79973 ಸದಸ್ಯರು, ಅರಸೀಕೆರೆ 286429, ಅರಕಲಗೂಡು 190319, ಬೇಲೂರು 176744, ಚನ್ನರಾಯಪಟ್ಟಣ 279835, ಹಾಸನ 334942, ಹೊಳೆನರಸೀಪುರ 177664 ಹಾಗೂ ಸಕಲೇಶಪುರ ತಾಲ್ಲೂಕಿನಲ್ಲಿ 108453 ಫಲಾನುಭವಿಗಳಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248